RNU AIR DHARWAD

APRIL 24, 2026

## AKASHAVANI - DHARWAD
## PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಇಂದು, ರಾಷ್ಟ್ರೀಯ ಪಂಚಾಯಿತಿರಾಜ್ ದಿನಾಚರಣೆ.** ಸಂವಿಧಾನದ 73ನೇ ತಿದ್ದುಪಡಿ ಕಾಯಿದೆ ಮೂಲಕ, ಪಂಚಾಯಿತಿರಾಜ್ ವ್ಯವಸ್ಥೆ ಜಾರಿಗೆ ಬಂದ ಈ ದಿನದಂದು, ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಲು, ಶ್ರಮಿಸುತ್ತಿರುವ ಎಲ್ಲರಿಗೂ, ಇಲಾಖೆ, ಶುಭಾಶಯ ಕೋರಿದೆ.

<><><>

**ಇಲಾಖೆ ಸಚಿವ ಪ್ರಿಯಾಂಕ ಖರ್ಗೆ** ಶುಭಾಶಯ ಕೋರಿ, ಗ್ರಾಮಗಳ ಅಭಿವೃದ್ಧಿಯೇ ರಾಷ್ಟ್ರದ ಅಭಿವೃದ್ಧಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಇಲಾಖೆ, ಬೇರುಮಟ್ಟದಿಂದ, ಪ್ರಜಾಪ್ರಭುತ್ವವನ್ನು ಸಬಲಗೊಳಿಸುತ್ತಿದೆ. ಮಹಾತ್ಮ ಗಾಂಧಿಯವರ, 'ಗ್ರಾಮ ಸ್ವರಾಜ್ಯ'ದ ಕನಸು, ನನಸಾಗಿಸುವತ್ತ, ಪರಿಣಾಮಕಾರಿ ಹೆಜ್ಜೆ ಇಟ್ಟಿದೆ, ಎಂದಿದ್ದಾರೆ.

<><><>

**ರಾಜ್ಯದ ಗ್ರಾಮ ಪಂಚಾಯಿತಿಗಳಿಂದ,** 2025–26ನೇ ಸಾಲಿನಲ್ಲಿ, ಸಾವಿರದ 3 ನೂರಾ 82 ಕೋಟಿ ರೂಪಾಯಿ, ತೆರಿಗೆ ಸಂಗ್ರಹವಾಗಿದೆ.

<><><>

**ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ,** ಪ್ರಲ್ಹಾದ ಜೋಶಿ ಎಕ್ಸ್ ಮಾಧ್ಯಮದಲ್ಲಿ, ಗ್ರಾಮೀಣ ಭಾರತದ, ಅಭಿವೃದ್ಧಿ ಹಾಗೂ ಸಮರ್ಪಕ ಆಡಳಿತಕ್ಕೆ, ಪಂಚಾಯಿತಿ ವ್ಯವಸ್ಥೆಯ ಪಾತ್ರ ಮುಖ್ಯವಾದದ್ದು; ಪಂಚಾಯಿತಿರಾಜ್ ನಮ್ಮ ಪ್ರಜಾಪ್ರಭುತ್ವದ ಅಡಿಪಾಯ ಎಂದಿದ್ದಾರೆ.

<><><>

**ಕೈಗಾರಿಕೆ ಖಾತೆ ಸಚಿವ, ಎಂ.ಬಿ. ಪಾಟೀಲ,** ತಮ್ಮ ಶುಭಾಶಯ ಸಂದೇಶದಲ್ಲಿ, 1993ರ ಏಪ್ರಿಲ್ 24 ರಂದು, ಅಂದಿನ ಪ್ರಧಾನಮಂತ್ರಿ ರಾಜೀವ ಗಾಂಧಿ ಅವರ ನೇತೃತ್ವದಲ್ಲಿ, ಪಂಚಾಯಿತಿರಾಜ್ ವ್ಯವಸ್ಥೆ ಜಾರಿಗೊಂಡಿತು ಎಂದು, ತಿಳಿಸಿದ್ದಾರೆ.

<><><>

**ಅಧಿಕಾರ ವಿಕೇಂದ್ರಿಕರಣದ** ಕ್ರಾಂತಿಕಾರಕ ಹೆಜ್ಜೆ, ಪಂಚಾಯಿತಿರಾಜ್ ವ್ಯವಸ್ಥೆ. ಪ್ರಜಾಪ್ರಭುತ್ವದ ನಿಜವಾದ ಶಕ್ತಿ. ಹಳ್ಳಿಯಿಂದ ದಿಲ್ಲಿ ವರೆಗೆ, ಜನಸಾಮಾನ್ಯರಿಗೆ ಅಧಿಕಾರ ನೀಡುವ, ಈ ವ್ಯವಸ್ಥೆಯನ್ನು ಬಲಪಡಿಸೋಣ ಎಂದು, ಕಾರ್ಮಿಕ ಖಾತೆ ಸಚಿವ, ಸಂತೋಷ ಲಾಡ, ಎಕ್ಸ್ ಮಾಧ್ಯಮದಲ್ಲಿ ಕೋರಿದ್ದಾರೆ.

<><><>

**ಧಾರವಾಡ ಜಿಲ್ಲೆ,** ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಹುಬ್ಬಳ್ಳಿ ತಾಲೂಕು, ಅಮರಗೋಳದ, ಶ್ರೀ ಜಗಜ್ಯೋತಿ ಬಸವೇಶ್ವರ, ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಕೇಂದ್ರದ, ವಿವಿಧೋದ್ದೇಶ ಸಭಾಂಗಣದಲ್ಲಿ, ನಾಳೆಯಿಂದ ಐದು ದಿನಗಳ ಕಾಲ, ಇನ್‌ಕಾಮೆಕ್ಸ್ – 20'26 ಆಯೋಜಿಸಿದೆ.

<><><>

**ನಾಳೆ ಸಂಜೆ, 4 ಗಂಟೆಗೆ ಆಯೋಜಿತ** ಸಮಾರಂಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾವೇಶಕ್ಕೆ ಚಾಲನೆ ನೀಡಲಿದ್ದಾರೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಕೇಂದ್ರ ಕೈಗಾರಿಕೆಗಳ ಖಾತೆ ಸಚಿವ, ಪಿಯೂಷ ಗೋಯಲ್, ಕೇಂದ್ರ ವಿಮಾನಯಾನ ಖಾತೆ ಸಚಿವ ಕೆ. ರಾಮಮೋಹನ ನಾಯ್ಡು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಚಿವ ಸಂಪುಟದ ಸಹೋದ್ಯೋಗಿಗಳು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ, ಕೈಗಾರಿಕಾ ವಲಯದ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

**ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದ,** ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನ, ಇನ್‌ಕಾಮೆಕ್ಸ್ ನಲ್ಲಿ, ಕರ್ನಾಟಕ ಸೇರಿದಂತೆ, ವಿವಿಧ ರಾಜ್ಯಗಳ, 300ಕ್ಕೂ ಅಧಿಕ ಅತ್ಯಾಧುನಿಕ ಕೈಗಾರಿಕೆಗಳ, ವಸ್ತು ಪ್ರದರ್ಶಿನಿ ಆಯೋಜಿತವಾಗಿದೆ.

<><><>

**ಕೆ.ಸಿ.ಸಿ.ಐ. ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಸೇರಿದಂತೆ,** ಪದಾಧಿಕಾರಿಗಳು, ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆ – ಎಂ.ಎಸ್.ಎಂ.ಇ. ವಲಯದ, ನವೋದ್ಯಮಗಳು, ಮಹಿಳಾ ಉದ್ಯಮಶೀಲತೆ ಸೇರಿದಂತೆ, ಹಲವು ಗೋಷ್ಠಿಗಳನ್ನು ಆಯೋಜಿಸಿದ್ದಾರೆ.

<><><>

**ಧಾರವಾಡ ಜಿಲ್ಲೆ, ನವಲಗುಂದ ತಾಲೂಕು,** ತಿರ್ಲಾಪುರ ಗ್ರಾಮದಲ್ಲಿ, ಅಪ್ರಾಪ್ತ ವಯಸ್ಸಿನ ಬಾಲಕನಿಂದ, ಸಾರಾಯಿ ಮಾರಾಟ ಮಾಡಿಸುತ್ತಿದ್ದ ಪ್ರಕರಣದಲ್ಲಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಅಕ್ಕ ಪಡೆ ಸಿಬ್ಬಂದಿ, ಪರಿಶೀಲಿಸಿ, ಬಾಲಕನ ತಂದೆಗೆ ನೋಟಿಸ್ ನೀಡಿ, ಬಾಲಕನನ್ನು ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಉಣಕಲ್ಲ ಸರ್ಕಾರಿ ಬಾಲ ಮಂದಿರದಲ್ಲಿ ದಾಖಲಿಸಿದ್ದಾರೆ.

<><><>

**ಇಂತಹ ಪ್ರಕರಣಗಳು ಕಂಡುಬಂದಲ್ಲಿ,** ಮಕ್ಕಳ ಉಚಿತ ಸಹಾಯವಾಣಿ, 1–0–9–8ಕ್ಕೆ ಕರೆ ಮಾಡಿ, ದೂರು ಸಲ್ಲಿಸುವಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋರಿದೆ.

<><><>

**2026ನೇ ಸಾಲಿನ,** ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ – 1ರ ಫಲಿತಾಂಶದಲ್ಲಿ, ಧಾರವಾಡ ಜಿಲ್ಲೆಯ ವಿದ್ಯಾರ್ಥಿಗಳು, ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಸಂತಸ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯ ಒಟ್ಟು ಫಲಿತಾಂಶ, ಶೇಕಡ 95 ದಶಾಂಶ 5–9 ದಾಖಲಾಗಿ, ರಾಜ್ಯ ಶ್ರೇಯಾಂಕದಲ್ಲಿ, 12ನೇ ಸ್ಥಾನ ಪಡೆದಿದೆ. ಜಿಲ್ಲೆಯ ಎಲ್ಲ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳನ್ನು, ಸಚಿವ ಲಾಡ ಅಭಿನಂದಿಸಿದ್ದಾರೆ.

<><><>

**ಕರ್ನಾಟಕ ವಿಶ್ವವಿದ್ಯಾಲಯ ಸೇರಿದಂತೆ,** ರಾಜ್ಯದ ಎಲ್ಲ ಹಳೆಯ ವಿಶ್ವವಿದ್ಯಾಲಯಗಳ, ಪಿಂಚಣಿ ಸಮಸ್ಯೆ ಹಿನ್ನೆಲೆ, ರಾಜ್ಯ ಸರ್ಕಾರದಿಂದ, ಶೇಕಡ 70 ರಷ್ಟು ಪಿಂಚಣಿ ನೀಡಲು, ಚಿಂತನೆ ನಡೆದಿದೆ ಎಂದು, ಉನ್ನತ ಶಿಕ್ಷಣ ಖಾತೆ ಸಚಿವ, ಡಾಕ್ಟರ್ ಎಂ.ಸಿ. ಸುಧಾಕರ, ತಿಳಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ, ಗಾಂಧಿ ಭವನದಲ್ಲಿ ಜರುಗಿದ, 75ನೇ ಘಟಿಕೋತ್ಸವದಲ್ಲಿ, ಅವರು ಮಾತನಾಡಿದರು. ಸ್ಕೌಟ್ ಯೋಜನೆ ಅಡಿ, ಆಯ್ದ ವಿದ್ಯಾರ್ಥಿಗಳನ್ನು, ಬರುವ ಜೂನ್ ತಿಂಗಳಿನಲ್ಲಿ, ಇಂಗ್ಲೆಂಡಿಗೆ ಕಳುಹಿಸಲಾಗುವುದು ಎಂದರು.

<><><>

**ಹೆಸರಾಂತ ಸಾಮಾಜಿಕೋದ್ಯಮಿ,** ಮಜೇಥಿಯಾ ಫೌಂಡೇಷನ್ ಕಾರ್ಯಾಧ್ಯಕ್ಷರಾದ, ಹುಬ್ಬಳ್ಳಿಯ ಜಿತೇಂದ್ರ ಮಜೇಥಿಯಾ ಸೇರಿದಂತೆ, ಮೂವರು ಸಾಧಕರಿಗೆ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ, ಗೌರವ ಡಾಕ್ಟರೆಟ್ ಪ್ರದಾನಿಸಿ, ಗೌರವಿಸಿದರು.

ಪ್ರದೇಶ ಸಮಾಚಾರಕ್ಕಾಗಿ, ಜಿತೇಂದ್ರ ಮಜೇಥಿಯಾ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ – ನ್ಯಾಸ್,** ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ, ಜೆ.ಆರ್.ಡಿ. ಟಾಟಾ ಸಭಾಭವನದಲ್ಲಿ, ಇಂದು ಮಧ್ಯಾಹ್ನ 3.30ಕ್ಕೆ 'ಡಾಕ್ಟರ್ ಕೆ. ಕಸ್ತೂರಿರಂಗನ್ ಸಂಸ್ಮರಣೆ; ಚಿರಂಜೀವಿ ದೃಷ್ಟಾರ' ಎಂಬ, ವಿಶೇಷ ಉಪನ್ಯಾಸ ಕಾರ್ಯಕ್ರಮ, ಆಯೋಜಿಸಿದೆ.

<><><>

**ಆಕಾಶವಾಣಿಯ, ಬಹುಶ್ರುತ, ಮನ್** ಕಿಬಾತ್ ಕಾರ್ಯಕ್ರಮದ, 133ನೇ ಆವೃತ್ತಿ, ನಾಡಿದ್ದು ಭಾನುವಾರ, ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ಜನತೆಯ ಅನಿಸಿಕೆ, ಅಭಿಪ್ರಾಯಗಳನ್ನು ಆಧರಿಸಿದ, ಮನದ ಮಾತಿನಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ತಮ್ಮ ವಿಚಾರಗಳನ್ನು, ದೇಶ–ವಿದೇಶಗಳ ಭಾರತೀಯರೊಂದಿಗೆ, ಹಂಚಿಕೊಳ್ಳಲಿದ್ದಾರೆ. ನಮೋ ಅಪ್ಲಿಕೇಷನ್, ಮೈ ಜಿ.ಓವಿ. ಓಪನ್ ಫೋರಂ ಅಥವಾ ಉಚಿತ ಸಹಾಯವಾಣಿ 1800–11–7800 ಮೂಲಕ, ಜನತೆ ತಮ್ಮ ಅಭಿಪ್ರಾಯ ಹಂಚಿಕೊಳ್ಳಲು, ಇಂದು ಕೊನೆ ದಿನ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**<><><>**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**